ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ, ಸಂಡೂರು ತಾಲ್ಲೂಕಿನ ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದಲ್ಲಿ ಡೈರೆಕ್ಟರ್ ಹುದ್ದೆಯನ್ನು ಪಜಾ ಮಾಡಿದ್ದೀರಿ ಎಂದು ಕೇಳಿದ್ದಕ್ಕೆ ಪರಭಾರೆ ಮಾಡಿದ್ದೇವೆಂದು ಹೇಳಿದ್ದಾರೆ. ಈ ಹುದ್ದೆಗೆ ಪರಭಾರೆ ಮಾಡಿರುವ ವ್ಯಕ್ತಿಗೆ ಬದಲಾಗಿ ಅವರಿಗಿಂತ ಯೋಗ್ಯ ವ್ಯಕ್ತಿ ಸಿಗಲಿಲ್ಲವೇ? ಇಷ್ಟು ವರ್ಷಗಳಿಂದ ಏಕೆ ಖಾಲಿ ಇಟ್ಟಿದ್ದೀರಿ?

ಶ್ರೀ ಡಿ. ಮಂಜುನಾಥ್.—ಅದು ಪೋಸ್ಟ್ ಗ್ರಾಜುಯೇಟ್ ಸೆಂಟರಾಗಿದ್ದರಿಂದ ಅದನ್ನು ಫಿಲ್ ಅಪ್ ಮಾಡುವುದಕ್ಕಾಗಿ ಯೂನಿವರ್ಸಿಟಿಗೆ ಬರೆದಿದ್ದೇವೆ. ಅವರು ಅದನ್ನು ಮಾಡಬೇಕು.

ಶ್ರೀ ಯು. ಭೂಪತಿ.—ಅಲ್ಲಿಗೆ ಅಲ್ಲಿನ ಆಡಳಿತ ಮಟ್ಟ ಕುಸಿದಿದೆ ಎಂಬುದನ್ನು ನೀವೆ ಒಪ್ಪಿಕೊಂಡಹಾಗಾಯಿತು. ಅಲ್ಲಿ ೩ ವರ್ಷಗಳ ಪಿ.ಜಿ. ಕೋರ್ಸ್ ಇದೆ. ಅದಕ್ಕೆ ಎಂ.ಟೆಕ್ ಮಾಡಿರುವ ಲೆಕ್ಚರರ್ಸ್ ರೀಡರ್ಸ್ ಬೇಕು. ಮೂರು ವರ್ಷಗಳಿಂದಲೂ ಇಬ್ಬರ್ಯಾರೂ ಅಲ್ಲಿಲ್ಲ. ಬೇರೆ ಯಾರೋ ಎಂ.ಎಸ್.ಸಿ. ಆದವರನ್ನು ಟೆಂಪರ್ವರಿಯಾಗಿಟ್ಟುಕೊಂಡು ಪಾಠ ಮಾಡುತ್ತಿದ್ದಾರೆ. ಅವರು ಟೆಕ್ನಿಕಲ್ ಹ್ಯಾಂಡಲ್ಲ. ಈಗಾಗಲೇ ಹಲವಾರು ವಿದ್ಯಾರ್ಥಿಗಳು ಹೈಕೋರ್ಟ್ ಕಟ್ಟೆ ಹತ್ತಲು ಪ್ರಯತ್ನ ಮಾಡುತ್ತಿದ್ದಾರೆ. ಇಷ್ಟೆಲ್ಲ ಆದರೂ ನಮಗೆ ಇದು ಸಂಬಂಧಪಟ್ಟಿದ್ದಲ್ಲ ಎಂದು ಹೇಳುತ್ತಿರುವಿರಲ್ಲ, ಇದು ಸರಿಯೇ?

ಶ್ರೀ ಡಿ. ಮಂಜುನಾಥ್.—ಹಿಂದೆ ಯೂನಿವರ್ಸಿಟಿಯಲ್ಲಿ ಹಣದ ತೊಂದರೆ ಇತ್ತು. ಆದರೆ ಈಗ ಯು.ಜಿ.ಸಿ.ಯಿಂದ ಗುಲ್ಬರ್ಗ ಯೂನಿವರ್ಸಿಟಿಗೆ ಗ್ರಾಂಟ್ ಸಿಕ್ಕಿದೆ. ಈಗ ಪೋಸ್ಟ್ ತುಂಬಲು ಕ್ರಮ ಕೈಗೊಂಡಿದ್ದಾರೆ. ಬೇಗ ಇದನ್ನು ಮುಗಿಸಲು ಯೂನಿವರ್ಸಿಟಿಗೆ ಬೇಕಾದರೆ ಹೇಳುತ್ತೇಕೆ. ಯಾವ್ಯಾವ ಲೆಕ್ಚರರ್ಸ್, ರೀಡರ್ಸ್, ಪ್ರೊಫೆಸರ್ಸ್ ಬೇಕೋ ಅವರನ್ನೆಲ್ಲಾ ತುಂಬಲು ಆದೇಶ ಕೊಡುತ್ತೇನೆ.

ವಿವಿಧ ವಿಶ್ವವಿದ್ಯಾನಿಲಯಂಗಳು ವಿವಿಧ ರೀತಿಯ ಅಂಕಗಳನ್ನು ನೀಡಿರುವುದರಿಂದ ನೇಮಕಾತಿಗಳಲ್ಲಿ ಪದವೀಧರರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ

೧ (ಸಿ) ಶ್ರೀ ಶಿವಸಿಂಗಪ್ಪ ಕಡಪಟ್ಟಿ (ಹುನಗುಂದ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದ ವಿಶ್ವವಿದ್ಯಾನಿಲಯಗಳ ಪದವೀಧರರಿಗೆ ಅಂಕಗಳನ್ನು ಕೊಡುವಾಗ ಒಂದೇ ರೀತಿ ಇಲ್ಲ ಎನ್ನುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ವ್ಯತ್ಯಾಸ ಇದ್ದಲ್ಲಿ ನೇಮಕಾತಿಯಲ್ಲಿ ಕೆಲವು ವಿಶ್ವವಿದ್ಯಾಲಯಗಳ ಪದವೀಧರರಿಗೆ ಅನ್ಯಾಯವಾಗುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ನೇಮಕಾತಿ ಮಾಡುವಾಗ ಸ್ಥಳಗಳನ್ನು ನಿಖರವಾದ ಹಂಚಿಕೆ ಮಾಡಿ ಆಯಾ ವಿಭಾಗಗಳ ಜನರನ್ನೇ ನೇಮಕ ಮಾಡುವುದಕ್ಕೆ ಸರಕಾರಕ್ಕೆ ಇರುವ ತೊಂದರೆ ಏನು? ಇದರಿಂದ ವಿಶ್ವವಿದ್ಯಾಲಯಗಳ ಅಂಕಗಳ ತಾರತಮ್ಯದ ತೊಂದರೆ ನಿವಾರಣೆಯಾಗುವುದಿಲ್ಲವೇ?

ಈ) ಇದೇ ಸೆಪ್ಟೆಂಬರ್ ೧೯೮೬ರಿಂದ ಆಗುವ ಎಲ್ಲಾ ಸರಕಾರಿ ಹಾಗೂ ಅರೆ ಸರಕಾರಿ ಸಂಸ್ಥೆಗಳ ನೇಮಕಾತಿಗಳನ್ನು ವಿಭಾಗವಾಗಿ ಹಂಚಿಕೆ ಆಯ್ಕೆ ಮಾಡುವುದಾಗಿ ಆಶ್ವಾಸನೆ ಕೊಡಲಾಗುವುದೇ?

ಶ್ರೀ ಎಸ್. ಎಸ್. ಕಡಪಟ್ಟಿ.—ಕೆಲವು ಕಡೆ ಪಾಂಜೆಡ್ ಕಾಲೇಜುಗಳಲ್ಲಿ ಇಂಥಿಂಥ ಯೂನಿವರ್ಸಿಟಿ ಸ್ಟೂಡೆಂಟ್ಸ್ ಆರ್ಜಿ ಹಾಕುವ ಅಗತ್ಯವಿಲ್ಲ ಎಂದು ಪ್ರಕಟಿಸುತ್ತಾರಲ್ಲ ಇದರ ಬಗ್ಗೆ ಏಕೆ ಹೀಗೆಲ್ಲಾ ಆಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ತಾರತಮ್ಯ ಏಕೆ ಸ್ವಾಮಿ? ಸರ್ಕಾರ ಇದನ್ನು ಹೇಗೆ ಅರ್ಥಮಾಡಿಕೊಳ್ಳುತ್ತದೆ. ಇದು ಯೂನಿವರ್ಸಿಟಿಯಲ್ಲಿ ಅಂಕ ಕೊಡುವುದರಲ್ಲಿ ಏನಾದರೂ ಲೋಪ ಇದೆಯೇ? ಇನ್ನು ಮುಂದೆ ಇಂಥದ್ದಾಗದಂತೆ ಏನು ಕ್ರಮ ಸರ್ಕಾರ ಕೈಗೊಳ್ಳುತ್ತದೆ. ಇದರ ಬಗ್ಗೆ ಕಾನ್‌ಸ್ಟಿಟ್ಯೂಷನಲ್ ತೊಂದರೆ ಇದೆ ಎಂದು ಹೇಳುತ್ತಿದ್ದೀರಲ್ಲ ಅದರ ಬಗ್ಗೆಲಾ ಡಿಪಾರ್ಟ್‌ಮೆಂಟ್‌ನ ಸಲಹೆ ಪಡೆದು ಯಾವ ಭಾಗದ ಜನರಿಗೂ ತೊಂದರೆ ಆಗದ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಲು ವಿಚಾರ ಮಾಡುತ್ತೀರಾ? ಇನ್ನು ನೇಮಕಾತಿ ಸಮಿತಿಗಳನ್ನು ನೇಮಿಸಲು ಒಪ್ಪಿದ್ದೀರಿ. ಯಾವಾಗ ಆರ್ಡರ್ಸ್ ಮಾಡುತ್ತೀರಿ ಸ್ವಾಮಿ?

ಶ್ರೀ ಡಿ. ಮಂಜುನಾಥ್.—ಇದು ಸ್ವಲ್ಪ ಗಹನವಾವ ಪ್ರಶ್ನೆ. ರಾಜ್ಯದ ನಾನಾ ಭಾಗಗಳಲ್ಲಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಪಿ.ಎಸ್.ಸಿ. ಆಗಲಿ, ರೆಕ್ರೂಟ್‌ಮೆಂಟ್ ಕಮಿಟಿ ಆಗಲಿ ಇವು ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಮತ್ತು ಹಳೇ ಮೈಸೂರು ಭಾಗ ಗಳಲ್ಲಿ ಒಂದೇ ಕಡೆ ನೇಮಕ ಸಮಿತಿ ಕರೆದು ಕೆಲಸ ಮಾಡಬೇಕಾದರೆ ಕೆಲವು ಸಮಸ್ಯೆಗಳಿವೆ. ಇನ್ನು ಮಾರ್ಕ್ಸ್ ಬಗ್ಗೆ ಹೇಳುವುದಾದರೆ ಕೆಲವು ಕಡೆ ವಿದ್ಯಾರ್ಥಿಗಳು ಕಮ್ಮಿ ಪಡೆದಿದ್ದಾರೆ ಎಂಬ ಭಾವನೆ ಇದೆ. ಮುಂದೆ ಇದನ್ನು ಒಂದೊಂದು ಜಿಲ್ಲೆಗೆ ಪ್ರತ್ಯೇಕವಾಗಿ ಮಾಡುವುದಕ್ಕೆ ಕಾನೂನಿನ ತೊಡಕಿದೆ. ಇದರ ಬಗ್ಗೆ ಲಾ ಡಿಪಾರ್ಟ್‌ಮೆಂಟ್‌ನವರನ್ನು ಕರೆದು ಚರ್ಚೆ ಮಾಡುತ್ತೇವೆ, ಇದನ್ನೆಲ್ಲಾ ಸಮಗ್ರ ವಾಗಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಎಸ್.ಎಸ್. ಕಡಪಟ್ಟಿ.—ಎಷ್ಟು ದಿವಸದೊಳಗೆ ಇದನ್ನು ಪರಿಶೀಲನೆ ಮಾಡಿ ತಿಳಿಸು ತ್ತೀರಿ ಎಂಬುದನ್ನು ಈ ಸದನಕ್ಕೆ ನಿರ್ದಿಷ್ಟವಾಗಿ ತಿಳಿಸಿ.

ಶ್ರೀ ಡಿ. ಮಂಜುನಾಥ್.—ವರ್ಷ ಆಗಲಾರದು. ತಿಂಗಳು ಆಗಬಹುದು.

ಶ್ರೀ ಎಸ್.ಎಸ್. ಕಡಪಟ್ಟಿ.—೬ ತಿಂಗಳೋ, ೯ ತಿಂಗಳೋ, ೧೨ ತಿಂಗಳೋ?

ಶ್ರೀ ಡಿ. ಮಂಜುನಾಥ್.—ಆದಷ್ಟು ಬೇಗ ಮಾಡುತ್ತೇನೆ.

ಪ್ರಶ್ನೆ ೧೦೪—ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ)

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ ದಯವಿಟ್ಟು ಇದನ್ನು ಮುಂದೂಡಬೇಕು. ಇದು ಸೋಷಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ಗೆ ಸೇರಿದ್ದು. ಸದರಿ ಮಂತ್ರಿಗಳು ಈಗ ಇಲ್ಲ.

ಅಧ್ಯಕ್ಷರು.—ಆಯಿತು.

ಪ್ರಶ್ನೆ ಸಂಖ್ಯೆ ೧೦೮—ಶ್ರೀ ಜಿ.ಎಸ್. ಅಜ್ಜೀಬಾಳ ಹೆಗಡೆ

ಶ್ರೀ ಜಿ.ಎಸ್. ಅಜ್ಜೀಬಾಳ ಹೆಗಡೆ.—ಎಷ್ಟು ವರ್ಷ ಆಯಿತು ಸಾರ್?

ಶ್ರೀ ಡಿ. ಮಂಜುನಾಥ್.—೧೯೮೫ರಲ್ಲಿ ಬಂದಿದೆ.

ಹೊನ್ನಾಳಿ ಮತ್ತು ಭದ್ರಾವತಿ ತಾಲ್ಲೂಕುಗಳ ಕೂಡ್ಲಗೆರೆ ಕಮ್ಮಾರಗಟ್ಟಿ ರಸ್ತೆಯ ಬಗ್ಗೆ

೧೦೯ (೩೭೫) ಶ್ರೀ ಡಿ.ಜಿ. ಬಸವನಗೌಡ (ಹೊನ್ನಾಳಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಹೊನ್ನಾಳಿ ಮತ್ತು ಭದ್ರಾವತಿ ತಾಲ್ಲೂಕುಗಳ ಕೂಡ್ಲಗೆರೆ ಕಮ್ಮಾರಗಟ್ಟಿ ರಸ್ತೆಯು ಮುಖ್ಯ ಹೆದ್ದಾರಿಯಾಗಿದ್ದು ಅದು ತುಂಬಾ ನಾಡುರಸ್ತಾಗಿರುವ ವಿಚಾರ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ರಸ್ತೆಯನ್ನು ದುರಸ್ತಿ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳು ವರೇ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈ ರಸ್ತೆ ಸಾಕಷ್ಟು ಸುಸ್ಥಿತಿಯಲ್ಲಿ ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಅಭಿವೃದ್ಧಿಗೆ ೮೩-೮೪ ರಿಂದ ೮೫-೮೬ರ ಕೊನೆಯವರೆಗೆ ೧೦.೫೭೭ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇದಲ್ಲದೆ ದುರಸ್ತಿ ಅನುದಾನದಲ್ಲಿಯೂ ಸಹ ಪ್ರತಿ ವರುಷವೂ ಆರ್ಥಿಕ ಲಭ್ಯತೆಗನುಗುಣವಾಗಿ ದುರಸ್ತಿಯನ್ನು ಮಾಡಲಾಗುತ್ತಿದೆ. ಉಳಿದ ಅಭಿವೃದ್ಧಿ ಕಾರ್ಯವನ್ನು ಆರ್ಥಿಕ ಲಭ್ಯತೆಗನುಗುಣವಾಗಿ ತೆಗೆದುಕೊಳ್ಳಲಾಗುವುದು.

ಪ್ರಶ್ನೆ ಸಂಖ್ಯೆ ೩೮೫—ಶ್ರೀ ಡಿ.ಜಿ. ಬಸವನಗೌಡ